

# ನಿದ್ದೆಗೊಮ್ಮೆ ನಿತ್ಯ ಮರಣ

ಮಾರುಕಟ್ಟೆಯ ತಟ್ಟೆಜಾಗಟೆ
ಆಚೆಗೂ ಈಚೆಗೂ
ಗುಜುಗುಜು ಸದ್ದಿಗೂ
ಗುದ್ದು ಕೊಟ್ಟು
ಈ ಲೋಕಾಂತದೊಳಗೂ ಏಕಾಂತ
ತಳ್ಳುಗಾಡಿಗಳ ಬಿಕ್ಕಳಿಕೆಗೆ ಎದೆ ಬಾವು
ಸಾಲಂಗಡಿಗಳ ಕಿಟಕಿ ಬಾಗಿಲುಗಳ
ಮೌನಮಾತು, ಪ್ರತಿಧ್ವನಿ.

ಮೈಯಲ್ಲಾ ಕಿವಿಯಾಗಿ
ನರನರಗಳೂ ತೆರೆದು
ಕೂಗುತರಂಗಕ್ಕೆ ಒಡ್ಡಿ
ರೂಢಿಯಾಗಿದೆ ಬದುಕು.

ತಾಯಿ, ನಾವು ನಿನ್ನ ಮಕ್ಕಳವ್ವ!

ಬದುಕಿನೊಂದಿಗಿನ ಬವಣೆಯ ಆಟ
ನಮಗೇನೊ ಆಹ್ಲಾದಕರವೆ?
ಸಿಗ್ನಲ್ಲಿನ ಬಳಿನಿಂತ ಲಾರಿಗೂ
ಅಂಜುತ್ತಿದ್ದೆವು ಅಳುಕುತ್ತಿದ್ದೆವು
ಹೊತ್ತ ಸರುಕು ಗಾಡಿಯ ಚಕ್ರಗತಿ
ಕಾಣುವುದಿಲ್ಲ, ಅದು ನಿತ್ಯದ ಗುರುತು

ನಿದ್ರಾ ಕಣ್ಣುಗಳ ಸುಳಿಯಿಂದ ಜಿನುವ ನೆತ್ತರು
ನಿಲ್ಲುವುದೆ ಈ ಯುಗಕೆ? ಮುಂದೇಕೆ?
ಬೆನ್ನಿಗಂಟಿದ ಗಡಿಯಾರದ
ಮುಳ್ಳುಗಳ ದನಿಗೆ ಮುಗಿದು ಹೋದವು
ರಾತ್ರಿಗಳು ಹಗಲುಗಳು
ತಳ್ಳುಗಾಡಿಗಳ ಈ ಚಕ್ರಗಳ ದಾರಿಗುಂಟ

● **ನಂ. ಮಹಾದೇವ್**

# ಅವಿನಾಭಾವ ಸಂಬಂಧ

ದುಡಿದ ಮೈ ಸೋತಾಗ ಸಿಕ್ಕಿದ್ದು
ಮೈ ಮುದುರುವಷ್ಟೇ ಜಾಗ
ಅದೂ ಎಡಬಿಡದೆ ಓಡಿದ
ಚಕ್ರಗಾಡಿಯ ಉರುಳು
ಕ್ಷಣಹೊತ್ತು ನಿಂತಾಗ!

ನಮ್ಮ ಬದುಕಿಗೂ ಈ ಕೈಗಾಡಿಗೂ
ಇಹುದೊಂದು ಅವಿನಾಭಾವ ಸಂಬಂಧ
ಅದೇ ಹೊರುಭಾರ ನಿರಂತರ!

ಆಹಾ! ದಣಿವಿನ ನಿವಾರಣೆಗೆ
ವಿಶ್ರಾಂತಿಯ ಹಂಬಲಕೆ
ಒಂದನ್ನೊಂದು ಅಪ್ಪಿದ

ಸಾಲುಗಾಡಿಗಳ ಬೆಂಬಲ
ಹಂಸತೂಲಿಕಾ ತಲ್ಪದಂತೆ!
ಅದೆಂತಹ ಸುಖನಿದ್ರೆ
ಮಧುರವೀ ಆಪ್ತತೆ!

ಎಲ್ಲಿ ಹೋದರೋ
ಹಿಂದಿರುವ ಸಾಲುಗಾಡಿಗಳ
ಮಂದಿ? ಕಾಣದಂತೆ!
ಮುಂದೆಂದೋ ಬರುವ
ಚಿರನಿದ್ರೆಗೆ ಈಗಿನಿಂದಲೇ
ನಮ್ಮೀ ತಯಾರಿ
ಶಿಶು–ಭಂಗಿ ಇರುವಂತೆ!

● **ಕೆ.ಆರ್.ಎಸ್. ಮೂರ್ತಿ**